ಅ) 103 ಪ್ರೌಢಶಾಲೆಗಳು.

ಆ) 13 ಪ್ರೌಢಶಾಲೆಗಳು ಮಂಜೂರಾಗಿವೆ.

ಇ) ಹೌದು.

ಚನ್ನಗಿರಿ ತಾಲ್ಲೂಕು ಬಸವರಾಜಪುರದ ಮೀನುಗಾರರ ಮನೆಗಳು

377 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕು ಬಸವರಾಜಪುರದ ಮೀನುಗಾರರ ಮನೆಗಳಿಗೆ ಪೌಂಡೇಷನ್ ಹಾಕಿದ್ದು ಇದುವರೆಗೆ ಮನೆಗಳು ಸಂಪೂರ್ಣ ಆಗದಿರಲು ಕಾರಣವೇನು;*

ಆ) *ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ವಸಂತ ವಿ. ಸಾಲಿಯಾನ್ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಬಸವರಾಜಪುರ ಮತ್ತು ಹೊಸಹಳ್ಳಿ ಗ್ರಾಮದಲ್ಲಿ 100 ಮನೆಗಳನ್ನು ನಿರ್ಮಾಣಮಾಡಲು ಮಂಜೂರಾದ 16.715 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಯನ್ನು ಭೂಸೇನಾ ನಿಗಮದವರು ವಹಿಸಿಕೊಂಡಿರುತ್ತಾರೆ. ನಿಗಮವು ಮನೆ ಕಟ್ಟುವ ಸಾಮಾಗ್ರಿಗಳ ಬೆಲೆ ಹೆಚ್ಚಾದ ಕಾರಣ ಹೆಚ್ಚುವರಿ ಹಣ ಒದಗಿಸಬೇಕೆಂದು ಕೋರಿದ್ದಾರೆ. ಹೆಚ್ಚುವರಿ ಹಣ ಒದಗಿಸಲು ಸಾಧ್ಯವಿಲ್ಲವೆಂದು, ಮಂಜೂರಾದ ಹಣದಲ್ಲಿಯೇ ಕಾಮಗಾರಿಯನ್ನು ಮುಗಿಸಲು ನಿಗಮಕ್ಕೆ ತಿಳಿಸಲಾಗಿದೆ. 16 ಮನೆಗಳ ಕಾಮಗಾರಿ ಮಾತ್ರ ಬಾಕಿ ಉಳಿದಿದೆ.

ಆ) 1994-95ನೇ ಸಾಲಿನಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಖಾಸಗೀ ವೈದ್ಯಕೀಯ ಕಾಲೇಜುಗಳಿಗೆ ನಿಗದಿ ಪಡಿಸಿರುವ ಸೀಟುಗಳು.

501 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯಾದ್ಯಂತ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ 1993-94, 94-95ನೇ ಸಾಲಿನಲ್ಲಿ ನಿಗಧಿ ಪಡಿಸಿದ ಸೀಟುಗಳ ಸಂಖ್ಯೆ ಎಷ್ಟು? (ಕಾಲೇಜುವಾರು ಮಾಹಿತಿ ನೀಡುವುದು)*

ಆ) *ಸರ್ಕಾರ ನಿಗಧಿಪಡಿಸಿದ ಸೀಟುಗಳಿಗಿಂತ ಹೆಚ್ಚು ಸೀಟುಗಳನ್ನು ಯಾವ ಯಾವ ಕಾಲೇಜುಗಳಿಗೆ ನೀಡಲಾಗಿದೆ (ಕಾಲೇಜುವಾರು ವಿವರ ನೀಡುವುದು)*

ಶ್ರೀ ಬಿ. ಶಿವಣ್ಣ (ವೈದ್ಯಕೀಯ ಶಿಕ್ಷಣ ಸಚಿವರು) :

ಅ)

	1993-94	1994-95
1) ಜೆ.ಎಸ್.ಎಸ್. ವೈದ್ಯಕೀಯ ಕಾಲೇಜು, ಮೈಸೂರು	200	200
2) ಜೆ ಜೆ ಎಂ ಮೆಡಿಕಲ್ ಕಾಲೇಜು, ದಾವಣಗೆರೆ	328	328
3) ಜೆ ಎನ್ ಮೆಡಿಕಲ್ ಕಾಲೇಜು, ಬೆಳಗಾಂ	195	195
4) ಎಂ.ಆರ್. ಮೆಡಿಕಲ್ ಕಾಲೇಜು, ಗುಲ್ಬರ್ಗಾ	185	185
5) ಆದಿ ಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ಳೂರು	195	195
6) ಶ್ರೀ ದೇವರಾಜ್ ಅರಸ್ ಮೆಡಿಕಲ್ ಕಾಲೇಜು, ಕೋಲಾರ	150	150
7) ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜು ತುಮಕೂರು	195	195